

# ಸಾರ್ಥಕ ಬದುಕು

ಮಹೇಶ್ವರ ಹುರುಕಡ್ಲಿ
ಚಿತ್ರ: ಸಂತೋಷ್ ಸಸಿಹಿತ್ಲು

ಇಳಿ ಸಂಜೆ ನಿವೃತ್ತ ಶಿಕ್ಷಕ ಬಸವನಗೌಡರ ಮನೆಮುಂದೆ ನಾಲ್ಕಾರು ಕಾರುಗಳು ಬಂದು ನಿಂತವು. ಕಾರಿನಿಂದಿಳಿದ ಯುವಕ–ಯುವತಿಯರು ಲಗುಬಗೆಯಿಂದ ಮೇಷ್ಟ್ರ ಮನೆಯ ಬಾಗಿಲಲ್ಲಿ ನಿಂತು 'ಸಾರ್, ಸಾರ್' ಎಂದು ಕೂಗಿದರು. ಮನೆಯೊಳಗಿನಿಂದ ಬಸವನಗೌಡರ ಧರ್ಮಪತ್ನಿ ಹೊರಬಂದು ಅಪರಿಚಿತ ಅತಿಥಿಗಳನ್ನುದ್ದೇಶಿಸಿ 'ಬನ್ನಿ, ಒಳಗ್ ಬನ್ನಿ' ಎಂದು ಸ್ವಾಗತಿಸುತ್ತಾ ಕೋಣೆಯೊಳಗೆ ಚಾಪೆ ಹಾಸಿದರು.

ಯಾವುದೋ ಪುಸ್ತಕದಲ್ಲಿ ಮುಳುಗಿದ್ದ ಬಸವನಗೌಡರು ತಮ್ಮ ಮುರುಕು ಕನ್ನಡಕವನ್ನುಜ್ಜಿ ಸರಿಮಾಡಿಕೊಳ್ಳುತ್ತಾ ಅತಿಥಿಗಳನ್ನು ಇದಿರುಗೊಳ್ಳಲು ಕೋಣೆಗೆ ಬಂದರು. ಬಂದ ಅತಿಥಿಗಳನ್ನು ಕಂಡೊಡನೆ ಬಸವನಗೌಡರ ಮುಖ ಮೊರದಗಲ ಅರಳಿತು. ಇತ್ತ ತಮ್ಮ ನೆಚ್ಚಿನ ಮೇಷ್ಟ್ರನ್ನು ಬಹುದಿನಗಳ ನಂತರ ಭೇಟಿಯಾದ ಖುಷಿಯಲ್ಲಿ ಶಿಷ್ಯಬಳಗ ಪುನೀತಗೊಂಡಿತ್ತು. ಉಭಯಕುಶಲೋಪರಿಯ ನಂತರ ಶಿಷ್ಯಪ್ರತಿನಿಧಿ ಶರಣ್ 'ಸಾರ್ ನಾವೆಲ್ಲ ಸೇರಿ ನಿಮ್ಮ ಹೆಸರಿನಲ್ಲೊಂದು ದೇವರ ಗುಡಿಯನ್ನು ಕಟ್ಟಬೇಕೆಂದಿದ್ದೇವೆ. ಅದಕ್ಕಾಗಿ ಇದೇ ಊರಿನಲ್ಲಿ ನಿವೇಶನವೊಂದನ್ನು ಖರೀದಿಸಲು ಮುಂದಾಗಿದ್ದೇವೆ' ಎಂದು ತಮ್ಮ ಉದ್ದೇಶವನ್ನು ಹೇಳಿದನು.

ಎಂಜಿನಿಯರ್ ಆಗಿದ್ದ ನೂರ್ ಜಹಾನ್ ಆ ಗುಡಿಯ ನೀಲನಕಾಶೆಯನ್ನು ಶಿಕ್ಷಕರಿಗೆ ಉತ್ಸಾಹದಿಂದ ತೋರಿಸಿದಳು. ಬಸವನಗೌಡರು 'ಈಗ ರಾತ್ರಿ ಆಗುತ್ತಿದೆ, ಊಟ ಮುಗಿಸಿ ಮಲಗಿ ಬೆಳಿಗ್ಗೆ ಮಾತಾಡುವ' ಎಂದು ಹೇಳಿ ಮಾತಿಗೆ ಅಲ್ಪವಿರಾಮವಿತ್ತರು. ಗುರುಗಳ ಮಾತಿನಂತೆ ಶಿಷ್ಯರೆಲ್ಲರೂ ಊಟ ಮಾಡಿ ಅವರ ಮನೆಯಲ್ಲೇ ಮಲಗಿದರು. ಮರುದಿನ ಬೆಳಿಗ್ಗೆ ಬಸವನಗೌಡರು ತಮ್ಮೊಂದಿಗೆ ಶಿಷ್ಯಂದಿರನ್ನು ವಾಯುವಿಹಾರಕ್ಕೆಂದು ತಮ್ಮ ಶಾಲೆಯ ಆವರಣಕ್ಕೆ ಕರೆದೊಯ್ದರು. 'ಮೇರಿ ಈ ತರಗತಿ ನಿನಗೆ ನೆನಪಿದೆಯೆ? ಇಲ್ಲೇ ನೀನು ಏಳನೇ ತರಗತಿ ಕಲಿತದ್ದು. ಆಗ ಈ ಕೋಣೆ ಎಷ್ಟು ಗಟ್ಟಿಮುಟ್ಟಾಗಿತ್ತು, ಈಗ ಹೇಗಾಗಿದೆ ನೋಡು' ಎಂದು ಬಸವನಗೌಡರು ತಮ್ಮ ಶಿಷ್ಯೆ ಮೇರಿ ಜೋಸೆಫ್‌ಗೆ ಹೇಳಿದರು. ಡಾಕ್ಟರ್ ಮೇರಿ ಬೆರಗುಗಣ್ಣುಗಳಿಂದ ಕೋಣೆಯನ್ನೊಮ್ಮೆ ನೋಡಿದಳು. 'ಸತೀಶ್ ಇದು ಪ್ರತಿ ಶನಿವಾರ ನಮಗೆ ವ್ಯಾಯಾಮವನ್ನು ಮಾಡಿಸುತ್ತಿದ್ದ ಜಾಗ, ಅಲ್ಲಿ ನೋಡು ಆ ಪರಿಕರಗಳನ್ನು' ಎಂದು ಹೇಳುತ್ತಾ ಹರಿದ ಬ್ಯಾಂಡ್ ಸೆಟ್, ಮುರಿದ ಪೀಪಿ, ಧ್ವನಿ ಕಳೆದುಕೊಂಡ ಗೆಜ್ಜೆಗಳನ್ನು ತೋರಿಸಿದರು. ರಾಜೀವ, ಸತೀಶ, ಕುಮಾರ ಆ ವಸ್ತುಗಳ ಮೇಲೆ ಕಣ್ಣಾಡಿಸಿದರು. ಹಾಗೇ ಮುಂದುವರಿದು 'ಮಲ್ಲಪ್ಪ ಈ ಬೆಲ್ ನೆನಪಿದೆಯೇ? ನೀನು ಬೆಲ್ ಹೊಡೆಯಲು ಬೇರೆಯವರಿಗೆ ಅವಕಾಶ ಕೊಡದೇ ಸುತ್ತಿಗೆಯನ್ನು ಬಚ್ಚಿಡುತ್ತಿದ್ದೆ' ಎಂದರು. ಅವರ ಮಾತಿಗೆ ಮಲ್ಲಪ್ಪನೂ ಸೇರಿ ಎಲ್ಲರೂ ಗೊಳ್ಳೆಂದು ನಕ್ಕರು.

ಮಲ್ಲಪ್ಪನಿಗೆ ಈಗ ಬೆಲ್ ಹೊಡೆಯಬೇಕೆಂದು ಆಸೆಯಾಗಿ ಸುತ್ತಿಗೆ ಹುಡುಕಿದ. ಆಗ ಬಸವನಗೌಡರು 'ಮಲ್ಲಪ್ಪ ಸುತ್ತಿಗೆ ಇಲ್ಲ, ಕಳೆದುಹೋಗಿದೆ. ಈಗ ಕಲ್ಲಿನಿಂದಲೇ ಬೆಲ್ ಹೊಡೆಯುತ್ತಿದ್ದೇವೆ, ನೋಡು ಕಲ್ಲಿನಿಂದ ಜಜ್ಜಿ ಜಜ್ಜಿ ಬೆಲ್ ಎಷ್ಟು ಹಾಳಾಗಿದೆ?' ಎಂದು ತೋರಿಸಿದರು. ಮಲ್ಲಪ್ಪ ನಿರಾಸೆಗೊಂಡ. 'ಶ್ವೇತ, ಈ ಕಬ್ಬಿಣದ ಡೆಸ್ಕ್ ನೆನಪಿದೆಯೇ? ನೀನು ಮಮತ, ಸುಜಾತ ಇವುಗಳಲ್ಲಿ ಜಾಗ ಸಾಲದೆಂದು ಗಲಾಟೆ ಮಾಡುತ್ತಿದ್ದದ್ದು ನೆನಪಿದೆಯೇ?' ಎಂದರು. ಅವರ ನೆನಪಿನ ಶಕ್ತಿಗೆ ಅಚ್ಚರಿಗೊಂಡ ಶ್ವೇತ ಡೆಸ್ಕ್ ಮೇಲೆ ಮಮತೆಯಿಂದ ಕೈಯಾಡಿಸಿದಳು. 'ಸಾರ್, ಈ ಡೆಸ್ಕ್ ಆಗಲೇ ತುಕ್ಕು ಹಿಡಿದಿವೆಯಲ್ಲಾ, ಇವುಗಳಲ್ಲಿ ಮಕ್ಕಳು ಹೇಗೆ ಕುಳಿತುಕೊಳ್ಳಬೇಕು?' ಎಂದು ಪ್ರಶ್ನಿಸಿದಳು. ಇಂತಹ ಪ್ರಶ್ನೆಯೊಂದನ್ನು ನಿರೀಕ್ಷಿಸುತ್ತಿದ್ದ ಬಸವನಗೌಡರು 'ಹೌದಲ್ಲವೇ? ಇಂತಹ ತುಕ್ಕು ಹಿಡಿದ ಡೆಸ್ಕ್‌ಗಳಲ್ಲಿ ಮಕ್ಕಳು